ಆ ಕಟ್ಟಡ ಆಗಲೇ ಸರಕಾರದ್ದಾಗಿ ಹೋಗಿದೆ. ದುಡ್ಡು ಮಾತ್ರ ಕೊಡಬೇಕಾಗಿದೆ. ಅದನ್ನು ಕೊಡಲಾಗುವುದು.

ಪ್ರಶ್ನೆ ಸಂಖ್ಯೆ ೭೭೨ (೧೯೯೨) ಸದಸ್ಯರು ಗೈರುಹಾಜರು

ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಕುಂದಾಪುರ ತಾಲ್ಲೂಕಿನಲ್ಲಿ ಪರವಾನಿಗೆ ನೀಡಿರುವ ಬಗ್ಗೆ

೨೩೦೬. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗಣಿ ಮತ್ತು ಭೂವಿಜ್ಞಾನ ಯಂತ್ರ ಜನ ಸೇವೆ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಶಿಲೆ ಕಲ್ಲು, ಕೆಂಪುಕಲ್ಲು ಮತ್ತು ಮರಳು ತೆಗೆಯಲು ಪರವಾನಿಗೆ ನೀಡಿರುವ ಜನರ ಸಂಖ್ಯೆ ಎಷ್ಟು ?

(ಗ್ರಾಮವಾರು ವಿವರ ನೀಡುವುದು)

ಆ) ಹಾಗಿದ್ದಲ್ಲಿ ಪರವಾನಗಿ ನೀಡಲಾಗಿರುವ ಸ್ಥಳಗಳಾವುವು ಮತ್ತು ಪಡೆದ ಶುಲ್ಕ ಎಷ್ಟು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವೆ ಹಾಗೂ ಕ್ರೀಡೆಗಳ ರಾಜ್ಯ ಸಚಿವರು).—

ಅ) ಸಾಮಾನ್ಯ ಮರುಳು – ೧
ಕಟ್ಟಡದ ಕಲ್ಲು – ೧
ಲ್ಯಾಟರೈಟ್ ಕೆಂಪುಕಲ್ಲು – ೩

ಒಟ್ಟು ೫ ಗುತ್ತಿಗೆಗಳು

ಆ) ಹಾಲಾಡಿ ಗ್ರಾಮ – ೧ (ಕಟ್ಟಡ ಕಲ್ಲು)
ಕರಕುಂಜೆ ಗ್ರಾಮ – ೨ (ಲ್ಯಾಟರೈಟ್)
ಇಮ್ಮೊಗೆ ಗ್ರಾಮ – ೧ (ಲ್ಯಾಟರೈಟ್)
ಶಂಕರನಾರಾಯಣ – ೧ (ಸಾಮಾನ್ಯ ಮರಳು)

ಈ ಗುತ್ತಿಗೆಗಳನ್ನು ೧೯೮೭–೮೮ನೇ ಸಾಲಿನಲ್ಲಿ ಮಂಜೂರು ಮಾಡಿದ್ದು ಸಂಬಂಧಪಟ್ಟ ಹಿರಿಯ ಭೂವಿಜ್ಞಾನಿಯವರು ಆಡಿಟ್ ರಿಪೋರ್ಟ್ ಕೊಟ್ಟಿರುವುದಿಲ್ಲ. ಹಾಗಾಗಿ ಈ ಗುತ್ತಿಗೆದಾರರು ರಾಯಲ್ಟಿ ಸಂದಾಯ ಮಾಡಿರುವುದಿಲ್ಲ, ಗುತ್ತಿಗೆದಾರರಿಂದ ಮುಂಗಡ ಸ್ಥಿರ ತೆರಿಗೆ ರೂ. ೧೯೭೮–೧೦ ಪೈಸೆ ಅರ್ಜಿ ಶುಲ್ಕ ಪ್ರತಿ ಕ್ವಾರಿ ಗುತ್ತಿಗೆ ಅರ್ಜಿಯೊಂದಿಗೆ ರೂ. ೨೫೦ ರಂತೆ ರೂ. ೧೨೫೦–೦೦ ಮತ್ತು ಠೇವಣಿ ರೂ. ೩೭೫೦–೦೦ ಇಲಾಖೆಗೆ ಸಂದಾಯವಾಗಿದೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೇವಲ ನಾಲ್ಕು ಗ್ರಾಮಗಳ ಹೆಸರುಗಳನ್ನು ಮಾತ್ರ ಕೊಟ್ಟಿದ್ದಾರೆ. ನನಗೆ ತಿಳಿದಹಾಗೆ ಕೆಂಪು ಕಲ್ಲು ತೆಗೆಯುವುದು ಕುಂದಾಪುರ, ಬೈಂದೂರು ಗುಜ್ಜಾರ ಇಂತಹ ಇನ್ನೂ ೧೨–೨೦ ಗ್ರಾಮಗಳಲ್ಲಿ ಶಿಲೆ ಕಲ್ಲು ಕ್ವಾರಿಗಳು ಇವೆ. ಇಲ್ಲಿ ಅನ್ ಅಥರೈಜ್ ಆಗಿ ಕ್ವಾರಿಯಾಗುತ್ತಿದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ, ಈಗ ಅವರು ಯಾರ್ಯಾರಿಗೆ ಪರವಾನಿಗೆಯನ್ನು ಕೊಟ್ಟಿದ್ದಾರೋ ಅಲ್ಲಿ ಕೂಡ ೫ ಸೆನ್ಸ್ ೧೦ ಸೆನ್ಸ್ ವಶಾತ್ರ ಗುತ್ತಿಗೆಗೆ ತೆಗೆದುಕೊಂಡು ಕಲ್ಲು ತೆಗೆಯುತ್ತಿದ್ದಾರೆ. ಆದರೆ ನಿಜವಾಗಿಯೂ ಎಕರೆಗಟ್ಟಲೆ ಯಲ್ಲ ಕಲ್ಲು ತೆಗೆಯುತ್ತಿರುವುದುಂಟು. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ ಇದರಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮತ್ತು ಪೋಲೀಸ್ ಇಲಾಖೆ

ಯವರು ಕೂಡ ಕೆಲವರ ಮಟ್ಟಿಗೆ ಕೆಲವು ಕಡೆಗಳಲ್ಲಿ ಕ್ರಮ ತೆಗೆದುಕೊಂಡಿದ್ದಾರೆ ಆದರೂ ಸಹ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಅವರನ್ನು ಬಿಡುವ ಹಾಗೆ ಮಾಡಿ ಕ್ರಮ ತೆಗೆದುಕೊಂಡು ಲೈಸೆನ್ಸ್ ಕೊಡುತ್ತೇವೆ ಎನ್ನುವ ಆಕ್ಷೇಪಣೆ ಮೇರೆಗೆ ಬಿಟ್ಟುಬಿಟ್ಟಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ಹಣ ನಷ್ಟವಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ರಾಯಲ್ಟಿ ಕೂಡ ಸಂದಾಯವಾಗಿಲ್ಲವೆಂತು ಪರ್‌ಪಸ್ ಆಗಿ ಆಡಿಟ್ ರಿಪೋರ್ಟ್ ಡಿಲೆಯಾಗುತ್ತಿದೆ. ಇಲ್ಲಿ ಕೆಲವು ವ್ಯಕ್ತಿಗಳ ಶಕ್ತಿ ಪ್ರಭಾವ ಸಹ ಇರಬಹುದು. ಇಲ್ಲಿ ಯಾರು ಪರ್ಮಿಶನ್ ತೆಗೆದುಕೊಂಡಿದ್ದಾರೋ ಅವರು ನಿಜವಾಗಿಯೂ ಸ್ವತಃ ಕಲ್ಲು ತೆಗೆಯುತ್ತಿಲ್ಲ. ಮಧ್ಯಸ್ಥಿತಿಕೆದಾರರು ಕಲ್ಲು ತೆಗೆಯುತ್ತಿದ್ದಾರೆ ಆದ್ದರಿಂದ ಇಲ್ಲಿ ಲೇಬರ್‌ಕಾಂಟ್ರ್ಯಾಕ್ಟ್ ಸೊಸೈಟಿ ಸ್ಥಾಪನೆ ಮಾಡಿ ಬೇರೆಯವರಿಗೆ ಪರವಾನಿಗೆ ಕೊಡುವ ಬಗ್ಗೆಲಾಗಿ ಅವರಿಗೆ ನೇರವಾಗಿ ಪರವಾನಿಗೆಯನ್ನು ಕೊಡುತ್ತೀರಾ? ನಂತರ ಒಂದು ಮಾತನ್ನು ನಾನು ಹೇಳುವುದಾದರೆ ತಾವೀಗ ಎಲ್ಲಾ ಆಡಳಿತವನ್ನು ವಿಕೇಂದ್ರೀಕರಣ ಮಾಡಿದ್ದೀರಿ. ಇದರಿಂದ ಅವ್ಯವಹಾರ ಸಹ ನಡೆಯುವುದಿಲ್ಲ. ಆದ್ದರಿಂದ ಮಂಡಲ ಪಂಚಾಯಿತಿ ಅಥವಾ ಜಿಲ್ಲಾ ಪರಿಷತ್ತಿನವರೇ ಪರವಾನಿಗೆ ಕೊಡುವ ಹಕ್ಕು ಕೊಟ್ಟು ಆಡಳಿತ ವಿಕೇಂದ್ರೀಕರಣ ಮಾಡುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.–ಮಾನ್ಯ ಅಧ್ಯಕ್ಷರೇ ಕುಂದಾಪುರ ತಾಲ್ಲೂಕಿನಲ್ಲಿ ಕಲ್ಲುತೆಗೆಯುವುದು ಅಕ್ರಮವಾಗಿ ನಡೆಯುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರ ಹತ್ತಿರ ಪಟ್ಟಿ ಏನಾದರೂ ಇದ್ದು ಅದನ್ನು ನಮಗೆ ಕೊಟ್ಟರೆ ತಕ್ಷಣ ನಮ್ಮ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿಕೊಟ್ಟು ಅಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳನ್ನು ಬಂದ್ ಮಾಡಿಸುತ್ತೇನೆ. ಇನ್ನು ಸರ್ಕಾರಕ್ಕೆ ನಷ್ಟವಾಗಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು, ನಮ್ಮಲ್ಲಿರತಕ್ಕಂಥ ಸಿಬ್ಬಂದಿ ವರ್ಗ ಬಹಳ ಚಿಕ್ಕದಾಂ. ಆದ್ದರಿಂದ ಅಕ್ರಮವಾಗಿ ನಡೆಯುವ ಕ್ವಾರಿಯಿಂದಾಗಿ ಸರ್ಕಾರಕ್ಕೆ ನಷ್ಟವಾಗುತ್ತದೆ. ನಮ್ಮ ಇಲಾಖೆಯ ಅಧಿಕಾರಿ ವರ್ಗವನ್ನು ಹೆಚ್ಚು ಮಾಡಬೇಕೆಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯನ್ನು ಬಲಗೊಳಿಸಬೇಕೆನ್ನುವ ಪ್ರಪೋಜಲ್ ಒಂದು ಸರ್ಕಾರದ ಮುಂದೆ ಇದೆ, ಎಲ್ಲೆಲ್ಲಿ ಇಂತಹ ಅಕ್ರಮಕ್ವಾರಿ ನಡೆಯುತ್ತಿದೆ ಎನ್ನುವುದನ್ನು ಮಾನ್ಯ ಸದಸ್ಯರು ಪಟ್ಟಿ ಮಾಡಿ ಕೊಟ್ಟರೆ ತಕ್ಷಣ ನಮ್ಮ ಇಲಾಖಾಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಆಗುತ್ತಿರುವ ಅಕ್ರಮವನ್ನು ನಿಲ್ಲಿಸುತ್ತೇನೆ. ಮತ್ತು ಸರ್ಕಾರ ಖಂಡಿತವಾಗಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ ಎಂದು ತಿಳಿಸುತ್ತೇನೆ.

ಆನಿವಾಸಿ ಭಾರತೀಯರಿಗೆ ಕೈಗಾರಿಕಾ ಪ್ರದೇಶದ ಮಂಜೂರಾತಿ ಕುರಿತು

೧೪೨೦. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).–ಮಾನ್ಯ ಭಾರಿ, ಹಾಗೂ ಮಧ್ಯವಂ ಕೈಗಾರಿಕೆಗಳ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಎ.ಐ.ಡಿ.ಬಿ.)ಯ ಪೀಣ್ಯ ಮತ್ತು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶಗಳಲ್ಲಿ ಆ ನಿವಾಸಿ ಭಾರತೀಯರಿಗಾಗಿ (ಎನ್‌ಆರ್‌ಐ) ವಿಂಗಡಿಸಲಾಗಿರುವ ಕೈಗಾರಿಕಾ ಪ್ರದೇಶದ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಈ ವಿಂಗಡಿಸಲು ಪ್ರದೇಶದಲ್ಲಿ ಎಷ್ಟು ಜನ ಆ ನಿವಾಸಿ ಭಾರತೀಯರಿಗೆ ಕೈಗಾರಿಕಾ ಪ್ರದೇಶಗಳನ್ನು ನೀಡಲಾಗಿದೆ (ಪ್ರತಿಯೊಬ್ಬರ ವಿವರಗಳನ್ನು ನೀಡುವುದಂ) ?

ಇ) ಈ ವಿಂಗಡಿಸಲು ಪ್ರದೇಶದಲ್ಲಿ ರಾಜ್ಯದ ಅಥವಾ ಹೊರ ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಪ್ರದೇಶ ನೀಡಿರುವ ವಿವರಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ವಂತು ವಿದ್ಯುಚ್ಛಕ್ತಿ ಸಚಿವರು).—

ಅ) ವಿಂಗಡಿಸಲಾಗಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸವುದಿಲ್ಲ